ಮೈಸೂರ್ ಡಿಸ್ಟ್ರಿಕ್ಟ್.

ಫಾರೆಸ್ಟ್ ಇಲಾಖಾ.

ನೋಟಿಫಿಕೇಷನ್.

ತಾರೀಖು 3ನೇ ಡಿಸೆಂಬರ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—1878ನೇ ಇಸವಿ ಫಾರೆಸ್ಟ್ ರೂಲ್ಸ್ 13ನೇ ಸೆಕ್ಷನ್ ಅನುಸರಿಸಿ, ಮೈಸೂರ್ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಲ್ಪಟ್ಟ ಬೆಂಕಿಯಿಂದ ತಡೆದ ಗವರ್ನಮೆಂಟ್ ಫಾರೆಸ್ಟ್ ವ ಪ್ಲಾಂಟೇಷನ್‌ಗಳು ಷಿಕಾರಿ ಮತ್ತು ಇತರ ಬ್ಯಾಟೆಗಳಿಗೆ 1897ನೇ ಇಸವಿ ಮೇ ಆಖೈರ್ ವರಿಗೆ ಬಂದ್ ಮಾಡಲ್ಪಟ್ಟಿರುತ್ತದೆ. ಯಾವ ಮನುಷ್ಯ ಯಾ ಮನುಷ್ಯರಾಗಲಿ ಸದರೀ ಫಾರೆಸ್ಟ್ ವ ಪ್ಲಾಂಟೇಷನ್‌ಗಳಲ್ಲಿ ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರ ಲಿಖಿತಮೂಲಕವಾದ ಹುಕುಂ ಪಡೆಯದೆ ಪ್ರವೇಶ ಮಾಡಕೂಡದು.

ತಾಲ್ಲೂಕು.	ಫಾರೆಸ್ಟ್ ವ ಪ್ಲಾಂಟೇಷನ್‌ಗಳ ಹೆಸರು.
ಹುಣಸೂರು ತಾಲ್ಲೂಕು	ವೀರನಹೊಸಹಳ್ಳಿ ಫಾರೆಸ್ಟ್
	ನಾಯಿಹಳ್ಳ ಸಂದಲ್ ಪ್ಲಾಂಟೇಷನ್
	ಗುರುಪುರ ಡಿಟೋ
	ಪಂಚವಳ್ಳಿ ಡಿಟೋ
	ದೊಡ್ಡಹರವೆರಿ ಪ್ರೊಡಕ್ಷನ್ ಬ್ಲಾಕ್
	ಆನೇಚೌಕೂರು ಡಿಟೋ
	ವೀರನಹೊಸಹಳ್ಳಿ ಡಿಟೋ
ಹೆಗ್ಗಡದೇವನಕೋಟೆ ತಾಲ್ಲೂಕು	ಮೇಟಿಕುಪ್ಪೆ ಫಾರೆಸ್ಟ್
	ಕಾಕನಕೋಟೆ ಡಿಟೋ
	ಬೇಗೂರು ಡಿಟೋ
	ಐನೂರು ಮಾದೇಗುಡಿ ಡಿಟೋ
	ಕಾಕನಕೋಟೆ ಪ್ಲಾಂಟೇಷನ್
	ಮಾಸ್ತಿಗುಡಿ ಡಿಟೋ
	ಮಂಚಗವ್ವಡನಹಳ್ಳಿ ಡಿಟೋ
	ಹಂಪಾಪುರ ಡಿಟೋ
ಗುಂಡ್ಲು ತಾಲ್ಲೂಕು	ಬೇರಂಬಾಡಿ ಫಾರೆಸ್ಟ್
	ಭಂಡಿಪುರ ಡಿಟೋ
	ಮದ್ದೂರು ಅಳಲೇ ಪ್ಲಾಂಟೇಷನ್
	ಹೊಂಗಹಳ್ಳಿ ಸಂದಲ್ ಪ್ಲಾಂಟೇಷನ್
ಚಾಮರಾಜನಗರದ ತಾಲ್ಲೂಕು	ಚಾಮರಾಜನಗರದ ಫಾರೆಸ್ಟ್

ತಾರೀಖು 30—11—96.

ಮೈಸೂರು ಡಿಸ್ಟ್ರಿಕ್ಟ್ ಗುಂಡ್ಲುರೇಂಜ್ ಸ್ಟೇಟ್ ಫಾರೆಸ್ಟ್ಸುಗಳಲ್ಲಿ ಜಮಾಯಿಸಲ್ಪಟ್ಟಿರುವ ಸುಮಾರು 1,000 ಗಾಡಿ ಬೋಜಾ ದನುವಿನ ಗೊಬ್ಬರವನ್ನ ಈ ಕೆಳಗೆ ನಮೂದಿಸುವ ಸ್ಥಳಗಳು ಮತ್ತು ತಾರೀಖುಗಳಲ್ಲಿ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರು ಹರಾಜು ಮೂಲಕ ವಿಕ್ರಯಿಸುತ್ತಾರೆ.

ಫಾರೆಸ್ಟ್ ಹೆಸರು.	ಮೊತ್ತ ಸುಮಾರು.	ಹರಾಜು ನಡೆಯುವ ಸ್ಥಳ.	ತಾರೀಖು.
ಭಂಡಿಪುರ	250 ಗಾಡಿ ಬೋಜಾ	ಗುಂಡ್ಲುಪೇಟೆ	11—1—97
ಬೇರಂಬಾಡಿ	85 ಡಿಟೋ	ಡಿಟೋ	13—1—97
ಚಾಮರಾಜನಗರ	330 ಡಿಟೋ	ಚಾಮರಾಜನಗರ	17—1—97

ಪರತ್ತು.—1895ನೇ ಇಸವಿ ಮಾರ್ಚಿ ಮಾಹೆ 15ನೇ ಮಕ್ಕುಮಿನ 15229.—ಆರ್. ಎಫ್. 155.—92ನೇ ನಂಬರ ಗವರ್ನಮೆಂಟ್ ನೋಟಿಫಿಕೇಷನ್ ಹರಾಜು ಕಾಲದಲ್ಲಿ ಓದಲ್ಪಡುತ್ತೆ.

ಟಿ. ಅಬ್ದುಲ್‌ಕರೀಂ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.